ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಇಮ್ಮೆಲ್: commissioner.pue@gmail.com ಫೋನ್: 080 23561944 ಫ್ಯಾಕ್ಸ್: 23361852

**ಜ್ಞಾಪನ**

**ವಿಷಯ:** ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡ/ಹೆಚ್ಚುವರಿ ತರಗತಿ ಕೊಠಡಿ/ಪ್ರಯೋಗಾಲಯ ಕೊಠಡಿ/ ಶೌಚಾಲಯ ಇತ್ಯಾದಿ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಕುರಿತು. (TSP)

**ಉಲ್ಲೇಖ:** 1.ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಯೋಸಕ 2017 (ಭಾಗ-01) ಬೆಂಗಳೂರು ದಿನಾಂಕ: 13-09-2017

2..ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ಸರ್ಕಲ್, ಬೆಂಗಳೂರು ಇವರ ಪತ್ರ ಸಂಖ್ಯೆ: ಮುಇಂ/ಪಂರಾಇಂಇ/ಕಾಇಂ-1/ತಾಂಸ-4/ಸಇಂ-3/ಪಾಮುಕಾಕ/17-18/5007 ದಿನಾಂಕ: - 04- 11-2017 ಮತ್ತು /5253/ ದಿ:14-11-2017.ಹಾಗೂ ದಿ:21-11-2017

3. ಈ ಕಛೇರಿಯ ಸಮಸಂಖ್ಯೆ ನಡವಳ ದಿನಾಂಕ: 5-12-2017.

**ಪ್ರಸ್ತಾವನೆ:**

ರಾಜ್ಯದ ಗಿರಿಜನ ಉಪಯೋಜನೆ ಮೀಸಲು ಕೇತ್ರದಲ್ಲಿ (ಟಿ.ಎಸ್.ಪಿ) ಬರುವ ಆಯ್ದ 14 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ 4202-01-600-0-04-423 ರಡಿ 1125.00ಲಕ್ಷ (ಒಂದು ಸಾವಿರದ ಒಂದನೂರ ಇಪ್ಪತ್ತೈದು ಲಕ್ಷ ಮಾತ್ರ) ರೂ.ಗಳಿಗೆ ಹೆಚ್ಚುವರಿತರಗತಿ ಕೊಠಡಿಗಳು/ಪ್ರಯೋಗಾಲಯ ಕೊಠಡಿ ಮತ್ತು ಶೌಚಾಲಯಗಳನ್ನು ನಿರ್ಮಿಸುವ ಕ್ರಿಯಯೋಜನೆಗೆ ಉಲ್ಲೇಖ(1)ರಲ್ಲಿ ಸರ್ಕಾರವು ಅನುಮೋದನೆ ನೀಡಿ ಅನುಷ್ಠಾನಗೊಳಸಲು ಶೇ.50 ರಷ್ಟು ಅನುದಾನ ಅಂದರೆ ರೂ562.50 (ಐದನೂರ ಅರವತ್ತೆರಡು ಲಕ್ಷ ಐವತ್ತು ಸಾವಿರ ಮಾತ್ರ) ಲಕ್ಷಗಳ ಅನುದಾನ ಬಿಡುಗಡೆ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೋಳಸುವ ಸಂಭಂಧ ಸೂಕ್ತ ಅಂದಾಜು ಪಟ್ಟಿ ಹಾಗೂ ನಕಾಶೆ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ಇಲಾಖೆಯವರನ್ನು ಕೋರಲಾಗಿದೆ.

ಉಲ್ಲೇಖ(2)ರಲ್ಲಿ ಅನುಮೋದಿಸಿರುವ ಕಾಮಗಾರಿಗಳಿಗೆ ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ಇಲಾಖೆಯವರು ಅಂದಾಜು ಪಟ್ಟಿಯನ್ನು ಸಲ್ಲಿಸಿ ಆಡಳತಾತ್ಮಕ ಅನುಮೋದನೆಯನ್ನು ಹಾಗೂ ಸದರಿ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿಕೆಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ(3)ರ ಈ ಕಛೇರಿಯ ಆದೇಶದಲ್ಲಿ ಸಲ್ಲಿಕೆಯಾದ ಅಂದಾಜು ಪಟ್ಟಿಗಳಿಗೆ ಆಡಳತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಉಲ್ಲೇಖ (1)ರಲ್ಲಿನ ವಿವರಗಳಂತೆ ಈ ರೀತಿಯಾಗಿ ನಿರ್ದೇಶಕರಿಗೆ ಅನುಮೋದಿತ ಮೊತ್ತದಲ್ಲಿ 13 ಅನುಮೋದಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅನುಬಂಧದಲ್ಲಿರುವಂತೆ ಒಟ್ಟು ರೂ535.00(ಐದನೂರ ಮೊವತ್ತೈದು ಲಕ್ಷ ಮಾತ್ರ)ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

**ಆದೇಶಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-423/2017-18 ದಿನಾಂಕ: 18-12-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(2)ರಲ್ಲಿ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ಸರ್ಕಲ್, ಬೆಂಗಳೂರು . ಇವರು ಸಲ್ಲಿಸಿರುವ ಅಂದಾಜುಪಟ್ಟಿಗಳಿಗೆ ಉಲ್ಲೇಖ(3) ರಲ್ಲಿ ಆಡಳತಾತ್ಮಕ ಅನುಮೋದನೆ ನೀಡಿರುವ 13 ಕಾಮಗಾರಿಗಳ

ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ 4202-01-600-0-04-423 ರಡಿ 562.50 ರೂ(ಐದನೂರ ಅರವತ್ತೆರಡು ಲಕ್ಷ ಐವತ್ತು ಸಾವಿರ ಮಾತ್ರ) ಲಕ್ಷಗಳಲ್ಲಿ ರೂ535.00(ಐದನೂರ ಮೊವತ್ತೈದು ಲಕ್ಷ ಮಾತ್ರ) ಲಕ್ಷ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಮೊತ್ತವನ್ನು ಅನುಬಂಧದಲ್ಲಿರುವಂತೆ ಜಿಲ್ಲಾಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಮೊತ್ತವನ್ನು ಅಪ್‌ಲೋಡ್ ಮಾಡಲು ಲೆಕ್ಕಪತ್ರಾಧಿಕಾರಿಗಳಿಗೆ ಸೂಚಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂದಿಸಿದ ಜಿಲ್ಲೆಗಳ ಉಪನಿರ್ದೇಶಕರುಗಳು, ಸ್ವೀಕೃತನ ರಶೀದಿಯ ಮೂಲಕ ಖಜಾನೆಯಿಂದ ಸೆಳೆದು ಸಂಬಂದಿಸಿದ ಜಿಲ್ಲೆಗಳ ವಿಭಾಗವಾರು ಕಾರ್ಯಪಾಲಕ ಅಭಿಯಂತರರುಗಳು, ಜಿಲ್ಲಾ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರುಗಳಿಗೆ ಪಾವತಿಸುವುದು. ಈ ರೀತಿಯಾಗಿ ಪಾವತಿಸಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರು ಲೆಕ್ಕಶೀರ್ಷಿಕೆ 8443-00-108-0-00 ಸಾರ್ವಜನಿಕ ಕಾಮಗಾರಿಗಳ ಠೇವಣಿ ಖಾತೆಗೆ ಜಮಾ ಮಾಡಿಕೊಂಡು ನಿಯಮಾನುಸಾರ ಕ್ರಮವಹಿಸುವುದು.

ಈ ರೀತಿಯಾಗಿ ಬಿಡುಗಡೆ ಮಾಡಿರುವ ಮೊತ್ತವನ್ನು ಅನುಬಂಧದಲ್ಲಿ ತಿಳಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ಅಲ್ಲದೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯದೆ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದಲ್ಲ. ಈ ನಿರ್ದೇಶನಾಲಯದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದೆ.

**ಷರತ್ತುಗಳು**

1. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಮಗ್ರಹಣೆಗಳಲ್ಲಿ ಪಾರದರ್ಶಕ ಆಧ್ಯಾದೇಶ 2000ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತವನ್ನು ಉಲ್ಲೇಖ(3)ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು.
3. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ ಭವಿಷ್ಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ತೆಗೆದುಕೊಳ್ಳವ ಎಲ್ಲಾ ನಿರ್ಧಾರಗಳಿಗೂ ಬದ್ಧರಾಗಿರತ್ತಕ್ಕದ್ದು.
4. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ/ಕಾಮಗಾರಿಗಳ ಅನುಷ್ಠಾನದ ಸಂಬಂದ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಡುವೆ ಏನೆ ವಿವಾದ/ಬಿನ್ನಾಭಿಪ್ರಾಯಗಳು ಉಂಟಾದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ತೆಗದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.
5. ಹಾಲಿ ಬಿಡುಗಡೆ ಮಾಡಿರುವ ಮೊತ್ತಕ್ಕೆ ಮೊದಲು ಪೂರ್ಣ ಪ್ರಮಾಣದ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಬಿಡುಗಡೆ ಮಾಡುತ್ತಿರುವ ಮೊತ್ತಕ್ಕೆ ಸೂಕ್ತ ಲೆಕ್ಕಪತ್ರಗಳನ್ನು ಇರಿಸತಕ್ಕದ್ದು.
7. ಎರಡು ಭಾರಿ ಹಣ ಪಾವತಿಯಾಗದಂತೆ ನೋಡಿಕೊಳ್ಳತಕ್ಕದ್ದು.
8. ಕಾಮಗಾರಿಯನ್ನು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದೆ. ಬಿಡುಗಡೆ ಮಾಡುತ್ತಿರುವ ಮೊತ್ತವು ಮೇಲಿನ ಕಾಮಗಾರಿಗಳಿಗೆ ಹೊರತುಪಡಿಸಿ ಬೇರೆ ಯಾವುದೇ ಕಾಮಗಾರಿಗೆ ಬಳಸಬಾರದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಇವರಿಗೆ,**

1. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ. ಗ್ರಾಮೀಣಾಭಿವೃದ್ಧಿ ಭವನ. ಆನಂದರಾವ್ ರಸ್ತೆ, ಬೆಂಗಳೂರು.
2. ಸಂಬಂದಿಸಿದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ.
3. ಉಪನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ ರಸ್ತೆ. ಬೆಂಗಳೂರು.
4. ಸಂಬಂದಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಯವರುಗಳಗೆ.
5. ಸಂಬಂದಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಗೆ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
8. ಹೆಚ್ಚುವರಿ/ಕಛೇರಿ ಪ್ರತಿ.

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. .ಸಂಬಂದಿಸಿದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಗೆ.

C:\Users\PALLAVI\Desktop\SOO1\amount released -tsp- 2017-18.docx

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಇಮ್ಮೆಲ್: commissioner.pue@gmail.com ಫೋನ್: 080 23561944 ಫ್ಯಾಕ್ಸ್: 23361852

ಆದೇಶಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-423/2017-18 ದಿನಾಂಕ: 18-12-2017.

**ಅನುಬಂಧ**

| ಕ್ರಸಂ | ಜಿಲ್ಲಾ ಉಪನಿರ್ದೇಶಕರು | ಕಾಲೇಜು ಸಂಕೇತ | ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿವರ | ಕಾಮಗಾರಿ ವಿವರ | | | | ಪಂಚಾಯತ್ ರಾಜ್ ಇಂಜನಿಯರ್ ವಿಭಾಗದ ಒಟ್ಟು ಅಂದಾಜು ಮೊತ್ತ | ಪಂಚಾಯತ್ ರಾಜ್ ಇಂಜನಿಯರ್ ವಿಭಾಗ | ಬಿಡುಗಡೆ ಮಾಡಲಾದ ಅನುದಾನ(ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|---|---|
| | | | | ತರಗತಿ ಕೊಠಡಿ | ಪ್ರಯೋಗಾಲಯ | ಶೌಚಾಲಯ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | | | |
| 1. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ದಾವಣಗೆರೆ | GD284 | ಪಲ್ಲಾಗಟ್ಟೆ, ಜಗಳೂರು ತಾ, ದಾವಣಗೆರೆ ಜಿಲ್ಲೆ. | 03 | 02 | 02 | 100.00 | 200.00 | ಹರಪ್ಪನಹಳ್ಳಿ | 100.00 |
| 2. | | GD150 | ಜಗಳೂರು, ದಾವಣಗೆರೆ ಜಿಲ್ಲೆ | 03 | 02 | 02 | 100.00 | | | |
| 3. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಳಗಾಂ ಜಿಲ್ಲೆ, ಬೆಳಗಾಂ. | DD043 | ಪಶ್ಚಾಪುರ, ಹುಕ್ಕೇರಿ ತಾ, ಬೆಳಗಾವಿ ಜಿಲ್ಲೆ | 03 | 02 | 02 | 100.00 | 100.00 | ಚಿಕ್ಕೋಡಿ | 50.00 |
| 4. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿತ್ರದುರ್ಗಜಿಲ್ಲೆ, ಚಿತ್ರದುರ್ಗ. | GG013 | ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ | 03 | 02 | 02 | 100.00 | 200.00 | ಚಿತ್ರದುರ್ಗ | 100.00 |
| 5. | | GG242 | ಕೊಂಡ್ಲಹಳ್ಳಿ ಮೊಳಕಾಲ್ಮೂರು ತಾ, ಚಿತ್ರದುರ್ಗ ಜಿಲ್ಲೆ | 03 | 02 | 02 | 100.00 | | | |
| 6. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು | NN009 | (ಬಾಲಕರ) ಹೆಚ್ ಡಿ ಕೋಟೆ, ಮೈಸೂರು ಜಿಲ್ಲೆ | 03 | 02 | 02 | 100.00 | 350.00 | ಕೆ.ಆರ್.ನಗರ | 175.00 |
| 7. | | NN185 | ಹೆಮ್ಮರಗಲ್ಲ, ಹೆಚ್ ಡಿ ಕೋಟೆ ತಾ, ಮೈಸೂರು ಜಿಲ್ಲೆ | 03 | 02 | 02 | 100.00 | | | |
| 8. | | NN257 | ಅಂತರ ಸಂತೆ, ಹೆಚ್ ಡಿ ಕೋಟೆ ತಾ, ಮೈಸೂರು ಜಿಲ್ಲೆ | 02 | 00 | 02 | 50.00 | | | |

| | | | | | | | | | |
|---|---|---|---|---|---|---|---|---|---|
| 9. | | NN256 | ಬಿ ಮಟಕೆರೆ, ಹೆಚ್ ಡಿ ಕೋಟೆ ತಾ. ಮೈಸೂರು ಜಿಲ್ಲೆ | 03 | 02 | 02 | 100.00 | | | |
| 10. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,ಯಾದಗಿರಿ ಜಿಲ್ಲೆ, ಯಾದಗಿರಿ. | KY079 | ರಂಗಂಪೇಟೆ,ಸುರಪುರ ಯಾದಗಿರಿ. | 02 | 00 | 02 | 55.00 | 55.00 | ಯಾದಗಿರಿ | 27.50 |
| 11. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ. | CC064 | (ಬಾಲಕರ) ಕಂಪ್ಲಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ. | 02 | 00 | 02 | 55.00 | 165.00 | ಬಳ್ಳಾರಿ | 82.50 |
| 12. | | CC105 | ಸಂಡೂರು, ಬಳ್ಳಾರಿ ಜಿಲ್ಲೆ | 02 | 00 | 02 | 55.00 | | | |
| 13. | | CC129 | ಬಂಡ್ರಿ, ಸಂಡೂರು ತಾ. ಬಳ್ಳಾರಿ ಜಿಲ್ಲೆ | 02 | 00 | 02 | 55.00 | | | |
| ಒಟ್ಟು | | | | | | | | 1070.00 | | 535.00 |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.